# ಪ್ರಕೃತಿಯನ್ನು ಆರಾಧಿಸಿದರೆ ದೇವನನ್ನು ಒಲಿಸಿಕೊಳ್ಳಬಹುದು

ಪೂಜ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು

ಪ್ರಕೃತಿಯಲ್ಲಿರುವ ಸೌಂದರ್ಯ, ಶಾಂತತೆಯನ್ನು ಆರಾಧಿಸಿದರೆ ಭಗವಂತನನ್ನು ಒಲಿಸಿಕೊಳ್ಳಬಹುದೆಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಪೂಜ್ಯಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಪ್ರವಚನದಲ್ಲಿ ತಿಳಿಸಿದರು. ಜಗತ್ತಿನಲ್ಲಿ ಸೌಂದರ್ಯವಿದೆ, ಹೂ ನೋಡಿ ಸಂತೋಷಪಡುತ್ತೇವೆ ಹಾಗೆಯೇ ಅದರ ಸುವಾಸನೆ ಕಾಣದಿದ್ದರೂ ಮನಸ್ಸಿನಲ್ಲಿ ಪ್ರಫುಲ್ಲತೆಯನ್ನು ಮೂಡಿಸುತ್ತದೆ. ಇದರಿಂದ ಮನಸ್ಸು ಸ್ವಚ್ಛಗೊಳ್ಳುತ್ತದೆ. ಇಂತಹ ಮನಸ್ಸಿನಲ್ಲಿ ದೇವರು ಕಾಣಿಸಿಕೊಳ್ಳುವನು. ಇದು ದೇವನೊಲಿಯುವ ಪರಿ; ಇದೇ ಅಂತರಂಗ ಶುದ್ಧಿ–ಸರಳ ಯೋಗ. ಆದ್ದರಿಂದ ಮನಸ್ಸನ್ನು ಸ್ವಚ್ಛವಾಗಿ ಮತ್ತು ಶಾಂತವಾಗಿ ಇಡಬೇಕು. ಸ್ವಚ್ಛವಾದ ಕನ್ನಡಿಯಲ್ಲಿ ಪ್ರತಿಬಿಂಬ ತೋರುವಂತೆ ಸ್ವಚ್ಛ ಮನಸ್ಸಿನಲ್ಲಿ ಪರಮಾತ್ಮ ಗೋಚರವಾಗುವನು.

ಜಗತ್ತಿನಲ್ಲಿ ಕಾಣುವುದು ಮತ್ತು ಅದರ ಹಿಂದೆ ಕಾಣದಿರುವುದು ಇದೆ. ಇವೆರಡನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಕಾಣುವುದು ಕ್ರಮೇಣ ಕ್ಷೀಣವಾಗಿ ಒಂದು ದಿನ ಮರೆಯಾಗುವುದು. ಆದರೆ ಕಾಣದೆ ಹಿಂದಿರುವ ಸತ್ಯ ಬದಲಾಗದೆ ಹಾಗೇ ಉಳಿಯುವುದು. ಇದು ಕಾಲ–ದೇಶದ ಪರಿದಿಗೆ ಸಿಲುಕದು. ಪ್ರತಿ ವಸ್ತುವಿನಲ್ಲಿ ಬಸವಣ್ಣನವರು ದೇವನನ್ನು ಕಂಡರು. ಹಸಿರು ಹುಲ್ಲಿನಲ್ಲೂ ದೇವನನ್ನು ಕಂಡರು. ಹುಲ್ಲು ಮರೆಯಾದೊಡನೆ, ಅದರ ಹಿಂದಿರುವ ಸತ್ಯವನ್ನು ಅರಿತರು. ಆದ್ದರಿಂದ ಬಸವಣ್ಣನವರು ಬಹುದೊಡ್ಡ ಅನುಭಾವಿಗಳೆನಿಸಿಕೊಂಡರು. ಜಗತ್ತಿನ ಒಳಗಿರುವುದನ್ನು ಹಾಗೂ ಹೊರಗಿರುವುದನ್ನು ಅನುಭವದಿಂದ ಅರಿತು ಹೇಳಿದರು " ಸಕಲವೂ ನೀನೆ, ನಿಶ್ಚಲವೂ ನೀನೆ"

ದೇವರ ದರುಶನದಿಂದ ದೂರವಾಗಲು ದುರಾಸೆಗಳೇ ಕಾರಣ, ಬೇಕು ಬೇಕೆಂಬ ದುರಾಸೆ. ವಸ್ತುಗಳನ್ನು ಬಳಸಿ ಸಂತೋಷ ಪಡಬೇಕೆ ವಿನಃ ಲೆಕ್ಕಹಾಕುವುದಲ್ಲ. 10 ರೂಪಾಯಿ ಇದ್ದಲ್ಲಿ ಖರ್ಚುಮಾಡಿ ಅನುಭವಿಸಬೇಕೆ ವಿನಃ ಕೇವಲ ಹತ್ತೇ ರೂಪಾಯಿ ಎಂದು ಮರುಗಬಾರದು. ಆಸೆ ಅತೃಪ್ತಿಯ ಹೊಗೆಯಾಡಲು ಕಾರಣ. ಲೆಕ್ಕ ಹಾಕುವಾತನೇ ಬಡವ, ಅನುಭವಿಸಿ ತೃಪ್ತಿಪಡುವಾತನೇ ಶ್ರೀಮಂತ. ದುರಾಸೆ ಆನಂದವನ್ನು ಮರೆ ಮಾಡುತ್ತದೆ. ಹೋಲಿಕೆ ಮಾಡುವಾತನಲ್ಲಿ ಅಸಂತೋಷ ಇರುತ್ತದೆ. ಹಕ್ಕಿಗಳು ಹಾಡುತ್ತವೆ, ಒಮ್ಮೆ ಶ್ರೀಮಂತ ಹಕ್ಕಿಗೆ ಹೇಳುವನು, "ನನ್ನ ಮನೆ ನೋಡು ಬಾ, ನನ್ನ ಮನೆಯಲ್ಲೇ ಇರು, ನಿನಗೊಂದು ಚಿನ್ನದ ಪಂಜರ ಮಾಡಿಸಿ ಕೊಡುತ್ತೇನೆ. ಅದಕ್ಕೆ ಉತ್ತರವಾಗಿ ಹಕ್ಕಿ ಹೇಳಿತು, ನಾನು ಸೀಮೆ ಇಲ್ಲದೆ ಹಾರುವೆ, ಹಲವಾರು ಸರೋವರಗಳ ನೀರು ಕುಡಿದಿರುವೆ. ನೀನು ಬಾಗಿಲು–ಕಿಟಕಿ ಮುಚ್ಚಿ ಕೊಂಡಿರುವೆ, ಕೇವಲ ನಲ್ಲಿ ನೀರಿಗೆ ಸೀಮಿತವಾಗಿರುವೆ. ಹಕ್ಕಿ ಮನೆ ಮೇಲೆ

ಕೂತು ಹಾರಾಡುವುದು. ಮನುಷ್ಯ ಮನೆಯೊಳಗೆ ಕೂತುಕೊಳ್ಳುವನು. ಹಕ್ಕಿ ಶ್ರೀಮಂತನಿಗೆ ಹೊರಬಂದು ನೋಡುವಂತೆ ಹೇಳಿತು. ಹಿಂದೆ ಮನುಷ್ಯ ಹಣವಿಲ್ಲದೆಯೂ ತೃಪ್ತಿಯಿಂದ ಜೀವನ ಸಾಗಿಸುತ್ತಿದ್ದ. ಇಂದು ಹಣ ಸಾಲದೆಂದು ಪರಿತಪಿಸುತ್ತಿದ್ದ.

ಬದುಕು ಸಂತೋಷದಿಂದ ಕೂಡಿರಲು, ದೇವಮಯವಾಗಲು ಮನಸ್ಸು ಸ್ವಚ್ಛವಾಗಿರಬೇಕು ಮತ್ತು ಶಾಂತವಾಗಿರಬೇಕು. ಸ್ವಚ್ಛ ಮನದಲ್ಲಿ ದೇವನ ದರುಶನವಾಗುವುದು. ಬಸವಣ್ಣನವರು "ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಮ ದೇವನನ್ನು ಒಲಿಸುವ ಪರಿ" ಎಂದು ನುಡಿದರು.

ಪ್ರವಚನದಲ್ಲಿ ಮೈಸೂರು, ಸುತ್ತೂರು ಹಾಗೂ ಸುತ್ತಮುತ್ತಲಿನ ಪ್ರದೇಶದ ಜಿಜ್ಞಾಸುಗಳು ಆಗಮಿಸಿ ಇದರ ಪ್ರಯೋಜನ ಪಡೆದರು. ಮುಂದಿನ ಪ್ರವಚನವು ಮೇ. 12 2019 ರಂದು ಜರುಗಲಿದೆ. ಆಸಕ್ತರು ಇದರ ಪ್ರಯೋಜನ ಪಡೆಯಬಹುದು.



**ಸುತ್ತೂರು ಶ್ರೀಕ್ಷೇತ್ರದಲ್ಲಿ ಪ್ರವಚನ ನೀಡುತ್ತಿರುವ ಪೂಜ್ಯಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು. ಚಿತ್ರದಲ್ಲಿ ಶ್ರದ್ಧೆಯಿಂದ ಪ್ರವಚನ ಆಲಿಸುತ್ತಿರುವ ಶ್ರೋತೃಗಳು.**